**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,**

**ಹೆಚ್.ಡಿ.ಕೋಟೆ**

**ಸಿ.ಸಿ.249/2024**

**ಪಿರ್ಯಾದುದಾರರು** **ಆರೋಪಿ**

**ವಿರುದ್ಧ**

ಹೆಚ್.ಡಿ.ಕೋಟೆ ಪೊಲೀಸ್ ಠಾಣೆ ಮುತ್ತಯ್ಯ ಮತ್ತು ಇನ್ನೊಬ್ಬರು

**:: ದೋಷಾರೋಪಣೆ ::**

**ಶ್ರೀ ಸಂತೋಷ ಕೊಠಾರಿ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹಚ್.ಡಿ.ಕೋಟೆ , ಆದ ನಾನು ನಿಮ್ಮ ಮೇಲೆ ಅಂದರೆಃ**

1. ಶ್ರೀ.ಮುತ್ತಯ್ಯ ಬಿನ್ ಲೇಟ್ ನಿಂಗಯ್ಯ
   ವಯಸ್ಸು 64 ವರ್ಷ
2. ವಿಜಯಲಕ್ಷ್ಮಿ ಬಿನ್ ಮುತ್ತಯ್ಯ
   ವಯಸ್ಸು 31 ವರ್ಷ,
   ಇಬ್ಬರ ವಿಳಾಸಃ ಹುಲಿಕುರ ಗ್ರಾಮ,
   ಹೆಚ್.ಡಿ.ಕೋಟೆ ತಾಲ್ಲೂಕು,
   ಮೈಸೂರು ಜಿಲ್ಲೆ.

**ಈ ಕೆಳಗಿನಂತೆ ದೋಷಾರೋಪಣೆ ಹೊರೆಸಿದ್ದೇನೆಃ**

ಸಾಕ್ಷಿ-1 ತಿಮ್ಮಯ್ಯ ಹಾಗೂ 1ನೇ ಆರೋಪಿಗೂ ಹೆಚ್.ಡಿ.ಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯ, ಹೆಗ್ಗಡಾಪುರ ಗ್ರಾಮದ ಪಕ್ಕದಲ್ಲಿ ಅವರುಗಳ ಅಜ್ಜಿಯಾದ ಬಸಮ್ಮರವರ ಹೆಸರಿನಲ್ಲಿರುವ ದಾಸನಪುರ ಸರ್ವೇ ನಂಃ10 ರಲ್ಲಿರುವ 4 ಎಕರೆ ಜಮೀನಿನ ವಿಚಾರದಲ್ಲಿ ತಕರಾರು ಇದ್ದು, ಸಿವಿಲ್ ಕೇಸು ನಡೆಯುತ್ತಿದ್ದು, ಕಳೆದ 10-12 ವರ್ಷಗಳಿಂದ ಸದರಿ ಜಮೀನು ಪಾಳು ಬಿದ್ದಿರುತ್ತದೆ. ಹೀಗಿರುವಾಗ ದಿನಾಂಕಃ 13.05.2024 ರಂದು ಮಧ್ಯಾಹ್ನ 02.30 ಗಂಟೆ ಸಮಯದಲ್ಲಿ ಸದರಿ ಜಮೀನಿನಲ್ಲಿ ಬೆಳೆದಿರುವ ಗಿಡ ಗಂಟೆಗಳನ್ನು ಕ್ಲೀನ್ ಮಾಡುತ್ತಿದ್ದಾಗ ಅಲ್ಲಿಗೆ ಸಾಕ್ಷಿ-1 ರಿಂದ ಸಾಕ್ಷಿ-3 ರವರುಗಳು ಹೋಗಿ ಇನ್ನೂ ಕೋರ್ಟ್ ನಿಂದ ಯಾವುದೇ ಆದೇಶವಾಗಿಲ್ಲ, ಏಕೆ ಕ್ಲೀನ್ ಮಾಡುತ್ತಿದ್ದೀರಾ ಎಂದು ಕೇಳಿದಾಗ ಆರೋಪಿಗಳಾದ ನೀವುಗಳು ಕೋರ್ಟ್ ಆದೇಶ ಆಗಿದೆ ಎಂದು ಹೇಳಿ ಜಗಳ ತೆಗೆದು, ಸಾಕ್ಷಿ-1 ರವರನ್ನು ಹಿಡಿದು ಕೆಳಕ್ಕೆ ಕೆಡವಿಕೊಂಡಾಗ 2 ನೇ ಆರೋಪಿಯಾದ ನೀವು ಸಾಕ್ಷಿ-1 ರವರ ಹುಡಕಟ್ಟನು

ಹಿಡಿದು ಹೊಟ್ಟೆಯ ಭಾಗಕ್ಕೆ ಅದುಮಿ ನೋವುಂಟು ಮಾಡಿದ್ದು, ನಿಮ್ಮ ಪೈಕಿ 1 ನೇ ಆರೋಪಿ ಸಾಕ್ಷಿ–1 ರವರ ಕತ್ತನ್ನು ಹಿಡಿದುಕೊಂಡು ಪರಚಿ ಗಾಯ ಪಡಿಸಿದ್ದು, ಅಲ್ಲದೆ 2 ನೇ ಆರೋಪಿಯಾದ ನೀವು ಬಿಡಿಸಲು ಹೋದ ಸಾಕ್ಷಿ–2 ರವರನ್ನು ಹಿಡಿದು ಎಳೆದಾಡಿ ಕರಿಮಣಿ ಸರವನ್ನು ಕಿತ್ತು ಹಾಕಿ ನೋವುಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವುಗಳು ಭಾ.ದಂ.ಸಂ.ಕಲಂ 323 ಸಹವಾಚಕ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಕೃತ್ಯವನ್ನು ಮುಂದುವರೆಸುತ್ತಾ, ನಿಮ್ಮ ಪೈಕಿ 2 ನೇ ಆರೋಪಿಯಾದ ನೀವು ಜಗಳ ಬಿಡಿಸಲು ಬಂದ ಸಾಕ್ಷಿ–3 ರವರಿಗೆ ಹೊಲದಲ್ಲಿ ಬಿದ್ದಿದ್ದ ಯಾವುದೋ ಚಪ್ಪಲಿಯನ್ನು ಎತ್ತುಕೊಂಡು ತಲೆಗೆ ಹೊಡೆದು ಅವಮಾನ ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವುಗಳು ಭಾ.ದಂ.ಸಂ.ಕಲಂ 355 ಸಹವಾಚಕ ಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಕೊನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಕೃತ್ಯವನ್ನು ಮುಂದುವರೆಸುತ್ತಾ, ನಿಮ್ಮ ಪೈಕಿ 1 ನೇ ಆರೋಪಿ ಸಾಕ್ಷಿ–3 ರವರಿಗೆ ಸತ್ತೆ ಕೊಚ್ಚುತ್ತಿದ್ದ ಮಚ್ಚಿನಿಂದ ಎಡಕೈ ಹೊಡೆದು ಗಾಯ ಪಡಿಸಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 324 ಸಹವಾಚಕ ಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

12 ನೇ ಆಗಸ್ಟ್ ಮಾಹೆ 2025.

–ಸಹಿ / –

**(ಸಂತೋಷ ಕೊಠಾರಿ)**
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಹೆಚ್.ಡಿ.ಕೋಟೆ.